# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 02/2019**

**ದೋ.ಸಾ. : 09 ಪ್ರಾ.ಸಾ. : 03**

**ದಿನಾಂಕಃ 22-04-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿತರ ಪರ ಶ್ರೀಮತಿ ಆರ್.ವಿ.ಎನ್ ವಕೀಲರಿಂದ**

5. ನಮ್ಮ ಮನೆಯಿಂದ ಕುಮಟಾಗೆ ಹೋಗಲು ಸುಮಾರು 45 ರಿಂದ 60 ನಿಮಿಷಗಳು ಬೇಕಾಗುತ್ತದೆ. ನಮ್ಮ ತೋಟ ಹಾಗೂ ಜಮೀನಿನ ಕೆಲಸವನ್ನು ನಮ್ಮ ತಾಯಿ ನೋಡಿಕೊಳ್ಳುತ್ತಾರೆ, ಅವಶ್ಯಕತೆ ಇದ್ದರೆ ಆಳುಗಳನ್ನು ತೆಗೆದುಕೊಳ್ಳುತ್ತಾರೆ. ನಾವು ಉಳುಮೆ ಮಾಡುತ್ತಿರುವ ಜಮೀನು ಸರಕಾರದಿಂದ ಆರೋಪಿತರಿಗೆ ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ. ಕುಮಟಾ ಹಾಗೂ ಬ್ರಹ್ಮೂರಿನ ನಡುವೆ ವಿರಳ ಬಸ್ ಸಂಚಾರ ಇರುತ್ತದೆ ಎಂದರೆ ಸರಿ. ಗೋಕರ್ಣದಲ್ಲಿ ನಮಗೆ ಬೇರೆ ಮನೆ ಇರುವುದಿಲ್ಲ. ಈ ಪ್ರಕರಣ ದಾಖಲಾಗುವ ಮೊದಲು ನನ್ನ ತಾಯಿ ಆರೋಪಿತರ ವಿರುದ್ದ ದೂರನ್ನು ಸಲ್ಲಿಸಿದ್ದರು ಎಂದರೆ ಸರಿ. ದೂರು ನೀಡಿದ ನಂತರ ನನ್ನ ತಾಯಿ ಆರೋಪಿತರಿಗೆ ಸೇರಿದ ಜಮೀನಿನ ಬೆಳೆ ನಾಶವನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈ ಸಂಬಂಧ ಆರೋಪಿತರು ನನ್ನ ತಾಯಿಯ ವಿರುದ್ದ ದೂರನ್ನು ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ.

6. ದಿಃ 12-11-2017 ರಂದು ನಡೆದ ಘಟನೆಯನ್ನು ನಾನು ಪ್ರತ್ಯಕ್ಷವಾಗಿ ನೋಡಿರುವುದಿಲ್ಲ, ಆದರೆ ನನ್ನ ತಾಯಿ ಹೇಳಿದ್ದರಿಂದ ನನಗೆ ಗೊತ್ತಾಯಿತು ಎಂದು ನುಡಿಯತ್ತಾರೆ. ನಾನು ಮತ್ತು ನನ್ನ ತಾಯಿ ದಿಃ 15-11-2017 ರಂದು ನಮ್ಮ ಮನೆಯ ಬಳಿ ಬಂದಾಗ, ಅಲ್ಲಿ ಸೀಮೆಎಣ್ಣೆ , ಬೆಂಕಿ ಪೊಟ್ಟಣ ಹಾಗೂ ಕಟ್ಟಿಗೆಯ ಪಂಜು ಇರಲಿಲ್ಲ ಎಂದರೆ ಸರಿಯಲ್ಲ. ಆ ನಂತರ ನಾವು ಸದರಿ ವಸ್ತುಗಳನ್ನು ಚಾಸಾ-4 ರಿಂದ 8 ರವರನ್ನು ಕರೆದು ತೋರಿಸಿಲ್ಲ ಹಾಗೂ ಈ ವಿಷಯವನ್ನು ಪೊಲೀಸರಿಗೆ ತಿಳಿಸಿಲ್ಲ ಎಂದರೆ ಸರಿಯಲ್ಲ. ಬೆಂಕಿ ಪೊಟ್ಟಣ ಯಾವ ಕಂಪನಿಯದು ಎಂದು ನನಗೆ ಗೊತ್ತಿಲ್ಲ. ಈಗ ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲುಗಳು ಆರೋಪಿತರಿಗೆ ಸಂಬಂಧಿಸಿದವುಗಳಲ್ಲ, ಅವುಗಳು ನಮಗೆ ಸೇರಿದವುಗಳು ಎಂದರೆ ಸರಿಯಲ್ಲ.

7. ಆರೋಪಿತರು ಮದ್ದೆ ಮಾಲು-1 ರಿಂದ 3 ವಸ್ತುಗಳನ್ನು ಇಟ್ಟು ಹೋದ ಬಗ್ಗೆ ನಾವು ಯಾವುದೇ ಫೋಟೋಗಳನ್ನು ತೆಗೆದಿರುವುದಿಲ್ಲ. ನಮ್ಮ ಮನೆಯ ಅಕ್ಕ-ಪಕ್ಕದಲ್ಲಿ ಸಾಕಷ್ಟು ಮನೆಗಳು ಇರುತ್ತವೆ ಎಂದರೆ ಸಾಕ್ಷಿಯು ದೂರದಲ್ಲಿರುತ್ತವೆ ಎಂದು ನುಡಿಯುತ್ತಾರೆ. ನನ್ನ ತಾಯಿ ಚಾಸಾ-1 ರವರಿಗೆ ವಯಸ್ಸಾಗಿರುವುದರಿಂದ, ಅವರನ್ನು ನೋಡಿಕೊಳ್ಳಲು ಬೇರೆಯವರನ್ನು ನೇಮಕ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಮನೆಯ ಮುಂದೆ ಇರುವ ಜಾಗ ನಮಗೆ ಸೇರಿದ್ದು ಎಂದರೆ ಸರಿ. ನಮ್ಮ ಜಮೀನಿನ ಹತ್ತಿರ ಆರೋಪಿತರಿಗೆ ಸಂಬಂಧಿಸಿದ ಯಾವುದೇ ಜಮೀನು ಇರುವುದಿಲ್ಲ. ನಮ್ಮ ಮನೆಯ ಅಕ್ಕ-ಪಕ್ಕದಲ್ಲಿ ಮನೆಗಳು ಇಲ್ಲದೇ ಇರುವ ಕಾರಣ, ಬೊಬ್ಬೆ ಹಾಕಿದರೆ ಯಾರಿಗೂ ಕೇಳಿಸುವುದಿಲ್ಲ ಎಂದರೆ ಸಾಕ್ಷಿಯು ರಸ್ತೆಯ ಮೇಲೆ ಹೋಗುವವರಿಗೆ ಕೇಳಿಸುತ್ತದೆ ಎಂದು ನುಡಿಯುತ್ತಾರೆ. ನಮ್ಮ ಮನೆಯಿಂದ ಬ್ರಹ್ಮೂರ ಬಸ್ ತಂಗುದಾಣ ಸುಮಾರು 100 ಅಡಿ ದೂರದಲ್ಲಿರುತ್ತದೆ.

8. ಕುಮಟಾದಿಂದ ಮಿರ್ಜಾನ್ ಗೆ ಬಸ್ ಮೇಲೆ ಬರಲು ಸುಮಾರು 15 ನಿಮಿಷಗಳು ಬೇಕಾಗುತ್ತದೆ. ಕುಮಟಾದಿಂದ ಮಿರ್ಜಾನಗೆ ಬಸ್ ಮೇಲೆ ಬರಲು ಸುಮಾರು ಅರ್ಧ ಗಂಟೆ ಬೇಕಾಗುತ್ತದೆ ಎಂದರೆ ಸರಿಯಲ್ಲ. ನಾನು ದಿಃ 15-11-2017 ರಂದು ಬೆಳಿಗ್ಗೆ 6-30 ಗಂಟೆ ಮಿರ್ಜಾನ್ ಗೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಬೆಳಗಿನ ಸಮಯದಲ್ಲಿ ಮಿರ್ಜಾನಿಂದ ಬ್ರಹ್ಮೂರಗೆ ಬರಲು ಬಸ್ಸಿನ ಸೌಕರ್ಯ ಇರುವುದಿಲ್ಲ ಎಂದರೆ ಸಾಕ್ಷಿಯು ಆ ದಿನ ನಾನು ಮತ್ತು ನನ್ನ ತಾಯಿ ಆಟೋದಲ್ಲಿ ಬಂದಿರುತ್ತೇವೆ ಎಂದು ನುಡಿಯುತ್ತಾರೆ. ದಿಃ 16-11-2017 ರಂದು ಪೊಲೀಸರು ನಮ್ಮ ಮನೆ ಬಳಿ ಪಂಚರೊಂದಿಗೆ ಬಂದಿಲ್ಲ ಹಾಗೂ ಯಾವುದೇ ಪಂಚನಾಮೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ಪೊಲೀಸರು 1 ನೇ ಆರೋಪಿಯನ್ನು ನಮ್ಮ ಮನೆಯ ಬಳಿ ಕರೆದುಕೊಂಡು ಬಂದಾಗ ಆತ ತಾನು ಸೀಮೆ ಎಣ್ಣೆ ಕ್ಯಾನ್ ಬೆಂಕಿ ಪೊಟ್ಟಣ, ಕಟ್ಟಿಗೆಯ ಪಂಜುನ್ನು ಚಾಸಾ-1 ರವರ ಮನೆಗೆ ಬೆಂಕಿ ಹಾಕಲು ತಂದಿದ್ದೆ, ಆದರೆ ಅವರು ಇಲ್ಲದ ಕಾರಣ ಅವುಗಳನ್ನು ಅಲ್ಲಿಯೇ ಇಟ್ಟು ಹೋದೆನು ಎಂದು ಹೇಳಲಿಲ್ಲ ಎಂದರೆ ಸರಿಯಲ್ಲ.

9. ದೇವಪ್ಪನಿಗೆ ಸೇರಿದ ಜಮೀನು ನಮ್ಮ ಜಮೀನಿನ ಪಕ್ಕದಲ್ಲಿರುತ್ತದೆ ಎಂದರೆ ಸರಿ. ದೇವಪ್ಪನಿಗೂ ಹಾಗೂ ಆರೋಪಿತರಿಗೂ ಜಮೀನಿನ ಸಲುವಾಗಿ ವೈಮನಸ್ಸು ಇರುತ್ತದೆ ಎಂದರೆ ಸರಿಯಲ್ಲ. ಚಾಸಾ-6 ಮತ್ತು 7 ರವರು ತಾವು ಆ ದಿನ ರಾತ್ರಿ 11-00 ಗಂಟೆ ಸಮಯದಲ್ಲಿ 1 ಆರೋಪಿತನು ಸೀಮೆ ಎಣ್ಣೆ ಕ್ಯಾನ್ ಬೆಂಕಿ ಪೊಟ್ಟಣ, ಕಟ್ಟಿಗೆಯ ಪಂಜು ತೆಗೆದುಕೊಂಡು

ಚಾಸಾ–1 ರವರ ಮನೆಯ ಹತ್ತಿರ ಹೋಗುತ್ತಿದ್ದನ್ನು ನಾವು ನೋಡಿರುತ್ತೇವೆ ಎಂದು ಹೇಳಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ 1 ನೇ ಆರೋಪಿಯು ಊರಿನ ಜನರಲ್ಲಿ ಚಾಸಾ–1 ರವರನ್ನು ಬಿಡುವುದಿಲ್ಲ, ಅವರನ್ನು ಸುಟ್ಟು ಹಾಕುತ್ತೇನೆ ಎಂದು ಊರಿನ ಜನರಲ್ಲಿ ಹೇಳಿಕೊಂಡು ತಿರುಗಾಡುತ್ತಿದ್ದನು ಎಂದು ಚಾಸಾ–6 ಮತ್ತು 7 ರವರು ಹೇಳಿಲ್ಲ ಎಂದರೆ ಸರಿಯಲ್ಲ. ನಾನು ಈ ಪ್ರಕರಣದ ಘಟನೆಯನ್ನು ಚಾಸಾ–1 ರವರ ಮೂಲಕ ಕೇಳಿ ತಿಳಿದುಕೊಂಡ ಬಗ್ಗೆ ಮತ್ತು 1 ನೇ ಆರೋಪಿಯು ಸೀಮೆಎಣ್ಣೆ ಕ್ಯಾನ್ ಬೆಂಕಿ ಪೊಟ್ಟಣ, ಕಟ್ಟಿಗೆಯ ಪಂಜನ್ನು ನಮ್ಮ ಮನೆಯ ಬಳಿ ಇಟ್ಟು ಹೋಗಿದ್ದನ್ನು ನೋಡಿರುತ್ತೇನೆ ಎಂದು ಪೊಲೀಸರ ಮುಂದೆ ಸುಳ್ಳು ಹೇಳಿಕೆಯನ್ನು ಹೇಳಿರುತ್ತೇನೆ ಎಂದರೆ ಸರಿಯಲ್ಲ.

10. ಮುದ್ದೆ ಮಾಲು–1 ರಂತಹ ಸೀಮೆಎಣ್ಣೆ ಕ್ಯಾನ್‌ಗಳು ಮತ್ತು ಬೆಂಕಿ ಪೊಟ್ಟಣ ಸಾಮಾನ್ಯವಾಗಿ ಅಂಗಡಿಯಲ್ಲಿ ಸಿಗುತ್ತವೆ ಎಂದರೆ ಸರಿ. ಮುದ್ದೆ ಮಾಲು–3 ಪಂಜಿನಲ್ಲಿರುವ ಕಟ್ಟಿಗೆಯು ಎಲ್ಲಾ ಕಡೆ ಸಿಗುತ್ತವೆ ಎಂದರೆ ಸರಿ. ಮುದ್ದೆ ಮಾಲು–3 ಪಂಜಿಗೆ ಸುತ್ತಿರುವ ಬಟ್ಟೆ ನಮ್ಮ ಮನೆಯ ಬಟ್ಟೆಯಾಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿತರು ಎಂದಿಗೂ ನನ್ನ ತಾಯಿಯನ್ನು ಮನೆಯ ಒಳಗೆ ದೂಡಿ, ಚಿಲಕ ಹಾಕಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ ಹಾಗಾ ಮುದ್ದೆ ಮಾಲು–1 ರಿಂದ 3 ನ್ನು ನಮ್ಮ ಮನೆಯ ಬಳಿ ತಂದು ಇಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೆ ಸರಕಾರದಿಂದ ಜಮೀನು ಮಂಜೂರಾಗಿದ್ದು, ಅವರನ್ನು ಆ ಜಾಗದಿಂದ ಓಡಿಸುವ ಸಲುವಾಗಿ, ಅವರ ವಿರುದ್ಧ ಎರಡು ಪ್ರಕರಣಗಳನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/–

(ಮಾಯಣ್ಣ ಬಿ.ಎಲ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಉತ್ತರಕನ್ನಡ, ಕಾರವಾರ